ಸದರಿ ಫಲಾನುಭವಿಗಳು ವಾಸ್ತವಿಕವಾಗಿ ಅರ್ಹರಿರುವುದು ಕಂಡುಬಂದಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಪರಿಶೀಲಿಸಿ ವರದಿ ನೀಡಲು ತಿಳಿಸಲಾಗಿದೆ.

ಇ) ಸರ್ಕಾರವು ಫಲಾನುಭವಿಗಳಿಗೆ ಜಿ.ಪಿ.ಎಸ್. ಪ್ರಗತಿ ಆಧಾರದ ಮೇಲೆ ಪ್ರತಿವಾರ ಅನುದಾನವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಸಾರ್ವಜನಿಕ ಸಂಚಾರಿ ಗ್ರಂಥಾಲಯಗಳು

178(342) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಸಂಚಾರಿ ಗ್ರಂಥಾಲಯಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಇತ್ತೀಚಿನ ದಿನಗಳಲ್ಲಿ ಸಂಚಾರಿ ಗ್ರಂಥಾಲಯಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದಕ್ಕೆ ಕಾರಣವೇನು ;

(ಇ) ರಾಜ್ಯಾದ್ಯಂತ ಈ ಸಂಚಾರಿ ಗ್ರಂಥಾಲಯಗಳಲ್ಲಿ ಇರುವ ಸದಸ್ಯರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ಈ ಸಂಚಾರಿ ಗ್ರಂಥಾಲಯಗಳಿಗೆ ಅಗತ್ಯ ಬಸ್ಸು ಪುಸ್ತಕ ಹಾಗೂ ಸಿಬ್ಬಂದಿಗಳನ್ನು ಒದಗಿಸದೇ ಇರಲು ಕಾರಣವೇನು ; ಸಾರ್ವಜನಿಕರಿಂದ ಈ ಕುರಿತು ದೂರುಗಳು ಬಂದಿವೆಯೇ ;

(ಉ) ಸಾರ್ವಜನಿಕ ಗ್ರಂಥಾಲಯಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ, ಮರೆಯಾಗುತ್ತಿರುವ ಸಂಚಾರಿ ಗ್ರಂಥಾಲಯಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಸಂಖ್ಯೆ –15 (ಅನುಬಂಧ–1 ಲಗತ್ತಿಸಿದೆ)

(ಆ) ಹೌದು. ಒಂದು ವಾಹನವನ್ನು ದುರಸ್ತಿಗೊಳಿಸಲಾಗಿದ್ದು, ಎರಡು ಸಂಚಾರಿ ಗ್ರಂಥಾಲಯಗಳ ವಾಹನ ಖರೀದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. 04 ಗ್ರಂಥಾಲಯ ವಾಹನಗಳನ್ನು ವಿಲೇ ಮಾಡಲು ಕ್ರಮವಹಿಸಲಾಗಿದೆ.

(ಇ) ಒಟ್ಟು ಸದಸ್ಯರ ಸಂಖ್ಯೆ : 16, 794 (ಅನುಬಂಧ–2 ಲಗತ್ತಿಸಿದೆ)

(ಈ) ಅಗತ್ಯ ವಾಹನ, ಪುಸ್ತಕ ಒದಗಿಸಲು ಕ್ರಮಕೈಗೊಂಡಿದೆ. ಪುಸ್ತಕ ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದ್ದು, ಕೆ.ಪಿ.ಎಸ್.ಸಿ. ಮುಖಾಂತರ 40 ತಾಂತ್ರಿಕ ಸಿಬ್ಬಂದಿಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿದೆ. ಇನ್ನುಳಿದಂತೆ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

(ಉ) ಸಂಚಾರಿ ಗ್ರಂಥಾಲಯ ವಾಹನಗಳನ್ನು ದುರಸ್ಥಿ ಮಾಡಿಸಲು ಕ್ರಮಕೈಗೊಂಡು ಅವಶ್ಯಕ ಪುಸ್ತಕ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಮೈಸೂರು ಹಾಗೂ ಮಂಗಳೂರು ಸಂಚಾರಿ ಗ್ರಂಥಾಲಯಗಳಿಗೆ ಹೊಸ ವಾಹನಗಳನ್ನು ಖರೀದಿಸಲು ಅನುಮೋದನೆ ನೀಡಿದ್ದು, ಈ ಪ್ರಕ್ರಿಯೆ ಚಾಲನೆಯಲ್ಲಿದೆ.

ಅನುಬಂಧ–1

ರಾಜ್ಯದಲ್ಲಿ ಒಟ್ಟು ಸಂಚಾರಿ ಗ್ರಂಥಾಲಯಗಳ ಪಟ್ಟಿ –15

1. ಮಕ್ಕಳ್ತು, ದಕ್ಷಿಣ ವಲಯ, ಬೆಳಗಳೂರು.
2. ಸಂಚಾರಿ ಗ್ರಂಥಾಲಯ, ತುಮಕೂರು.
3. ಸಂಚಾರಿ ಗ್ರಂಥಾಲಯ, ರಾಮನಗರ.
4. ಸಂಚಾರಿ ಗ್ರಂಥಾಲಯ ಶಿವಮೊಗ್ಗ.
5. ಸಂಚಾರಿ ಗ್ರಂಥಾಲಯ, ಧಾರವಾಡ.
6. ಸಂಚಾರಿ ಗ್ರಂಥಾಲಯ, ಬಳ್ಳಾರಿ.
7. ಸಂಚಾರಿ ಗ್ರಂಥಾಲಯ, ಮೈಸೂರು.
8. ಸಂಚಾರಿ ಗ್ರಂಥಾಲಯ, ಮಂಗಳೂರು.
9. ಸಂಚಾರಿ ಗ್ರಂಥಾಲಯ, ಗುಲ್ಬರ್ಗಾ.
10. ಸಂಚಾರಿ ಗ್ರಂಥಾಲಯ, ಕೊಡಗು.
11. ಸಂಚಾರಿ ಗ್ರಂಥಾಲಯ, ಉತ್ತರ ವಲಯ, ಬೆಳಗಳೂರು.
12. ಸಂಚಾರಿ ಗ್ರಂಥಾಲಯ, ಪಶ್ಚಿಮ ವಲಯ, ಬೆಂಗಳೂರು.
13. ಸಂಚಾರಿ ಗ್ರಂಥಾಲಯ, ಚಿಕ್ಕಮಗಳೂರು.
14. ಸಂಚಾರಿ ಗ್ರಂಥಾಲಯ, ವಿಜಾಪುರ.
15. ಸಂಚಾರಿ ಗ್ರಂಥಾಲಯ, ಚಿಕ್ಕಮಗಳೂರು.

ಅನುಬಂಧ-೩

ರಾಜ್ಯಾದ್ಯಂತ ಸಂಚಾರಿ ಗ್ರಂಥಾಲಯಗಳಲ್ಲಿ ಇರುವ ಸದಸ್ಯರ ವಿವರ

1	ಸಂಚಾರಿ ಗ್ರಂಥಾಲಯ, ಬಳ್ಳಾರಿ	300
2	ಸಂಚಾರಿ ಗ್ರಂಥಾಲಯ, ತುಮಕೂರು	1157
3	ಸಂಚಾರಿ ಗ್ರಂಥಾಲಯ, ಬೆಳಗಾವಿ	ಕೇಂದ್ರೀಕೃತ ಗ್ರಂಥಾಲಯದಲ್ಲಿ ಸದಸ್ಯತ್ವ ಪಡೆದ ಸದಸ್ಯರು ಸಂಚಾರಿ ಗ್ರಂಥಾಲಯದಲ್ಲಿ ಮಸ್ತಕ ಪಡೆಯಲು ಅರ್ಹರಿರುತ್ತಾರೆ. ಪ್ರತ್ಯೇಕವಾಗಿ ಇರುವುದಿಲ್ಲ.
4	ಸಂಚಾರಿ ಗ್ರಂಥಾಲಯ, ದಾವಣಗೆರೆ	ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಸದಸ್ಯತ್ವ ಪಡೆದ ಸದಸ್ಯರು ಸಂಚಾರಿ ಗ್ರಂಥಾಲಯಲ್ಲಿ ಮಸ್ತಕ ಪಡೆಯಲು ಅರ್ಹರಿರುತ್ತಾರೆ. ಆದಕಾರಣ ಪ್ರತ್ಯೇಕವಾಗಿ ಸದಸ್ಯತ್ವವನ್ನು ನಿರ್ವಹಿಸುವುದಿಲ್ಲ.....
5	ಸಂಚಾರಿ ಗ್ರಂಥಾಲಯ, ಧಾರವಾಡ	ನಗರ ಕೇಂದ್ರ ಗ್ರಂಥಾಲಯ, ಧಾರವಾಡ ಇದರ ವ್ಯಾಪ್ತಿಯಲ್ಲಿನ ಶಾಖೆಗಳಿಗೆ ಸಂಬಂಧಿಸಿದಂತೆ ಹಾಗೂ ಹುಬ್ಬಳ್ಳಿ ನಗರ ವ್ಯಾಪ್ತಿಗೆ ಸಂಬಂಧಿಸಿದಂತೆ ಸದಸ್ಯತ್ವವನ್ನು ಎಲ್ಲ ಗ್ರಂಥಾಲಯಗಳಿಗೆ ಸಂಬಂಧಿಸಿದ ಕೇಂದ್ರೀಕೃತ ನೆಮ್ಮದಿ ಇರುವುದರಿಂದ ಇಲ್ಲಿನ ಸದಸ್ಯರು ಆಯಾ ನಗರ ವ್ಯಾಪ್ತಿಯಲ್ಲಿನ ಯಾವುದೇ ಶಾಖೆ/ಸಂಚಾರಿ ಬಸ್ ವಿಲ್ಲಾಣದಿಂದ ಮಸ್ತಕ ಎರವಲು ಪಡೆಯಬಹುದಾಗಿದೆ. ಇಲ್ಲಿ ಸಂಚಾರಿ ಗ್ರಂಥಾಲಯ ವಾಹನಕ್ಕಾಗಿಯೇ ಪ್ರತ್ಯೇಕ ಸದಸ್ಯತ್ವ ನೋಂದಣಿ ಮಾಡಲಾಗುತ್ತಿಲ್ಲ.
6	ಸಂಚಾರಿ ಗ್ರಂಥಾಲಯ, ಭದ್ರಾವತಿ	234
7	ಸಂಚಾರಿ ಗ್ರಂಥಾಲಯ, ವಿಜಾಪುರ	4500
8	ಸಂಚಾರಿ ಗ್ರಂಥಾಲಯ, ಚಿಕ್ಕಮಗಳೂರು	789
9	ಸಂಚಾರಿ ಗ್ರಂಥಾಲಯ, ಕೇಂದ್ರ ವಲಯ, ಬೆಂಗಳೂರು	3016
10	ಸಂಚಾರಿ ಗ್ರಂಥಾಲಯ, ದಕ್ಷಿಣ ವಲಯ, ಬೆಂಗಳೂರು	6798
	ಒಟ್ಟು ಸದಸ್ಯರ ಸಂಖ್ಯೆ	16,794